ಪಿ.ಡಬ್ಲ್ಯೂ1 ಸಿ. ಸಿ.ನಂ. 746/14

ದಿನಾಂಕಃ 25-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ

ದೂರು ದಾಖಲು ಮಾಡಿದ ನಂತರ ಪೋಲಿಸರು 20 ಜುಲೈ 2011 ರಂದು ವಾಸವಿ ಕಲ್ಯಾಣ ಮಂಟಪ ರಸ್ತೆಯಲ್ಲಿ ಇರುವ ಕರ್ನಾಟಕ ಬೀಜ ನಿಗಮ ಕಛೇರಿಗೆ ಬಂದು ಕಛೇರಿಯಲ್ಲಿ ಇರುವ 2009-10 ನೇ ಸಾಲಿನ ಬ್ಯಾಂಕ್ ಪುಸ್ತಕಗಳನ್ನು ಪರಿಶೀಲನೆ ಮಾಡಿ ಸ್ಟಾಕ್ ಲೆಡ್ಜರ್ ಅನ್ನು ಪರಿಶೀಲನೆ ಮಾಡಿ, 4 ಕ್ಯಾಷ್ ಬುಕ್ ಗಳನ್ನು ಸ್ಟಾಕ್ ಲೆಡ್ಜರ್ ಅನ್ನು ಅವರೇ ತೆಗೆದುಕೊಂಡಿರುತ್ತಾರೆ. ಮುಂದಿನ ತನಿಖೆಗೆ ಬೇಕಾಗುತ್ತದೆ ಅಂತ ಪಂಚನಾಮೆ ಜರುಗಿಸಿ ಅವರೇ ತೆಗೆದುಕೊಂಡಿರುತ್ತಾರೆ. ನಾನು, ಆಂಜಿನಪ್ಪ, ಕೆಂಪಣ್ಣ, ಶ್ರೀನಿವಾಸರೆಡ್ಡಿ ಪೋಲೀಸ್ ಅಧಿಕಾರಿಯವರು ಇರುತ್ತಾರೆ. ನಂತರ ಪುನಃ ಎರಡನೇ ಬಾರಿಗೆ ಪಂಚನಾಮೆಗೆ ನವೆಂಬರ್ ತಿಂಗಳ 2011 ರಲ್ಲಿ ಬಂದಿರುತ್ತಾರೆ. ಕ್ಯಾಷ್ ರಿಜಿಸ್ಟರ್ ಬೇಕು ಅಂತ ಬಂದಿರುತ್ತಾರೆ. ಸೀಲ್ ಸಿಗದಿರುವ ಕಾರಣ ಪುನಃ ವಾಪಸ್ಸು ಹೋಗಿರುತ್ತಾರೆ. ಜನವರಿ 2012 ರಲ್ಲಿ ಪುನಃ ಬಂದಿದ್ದು ಆ ದಿನ ಆರೋಪಿ 12 ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡಿದ್ದು, ನಮ್ಮ ಆಫೀಸ್ ನ ಮುಖ್ಯಸ್ಥರು ಅವರು ಹೊರಗಡೆ ಹೋಗಬೇಕಾದರೆ ಕಛೇರಿ ಖರ್ಚಿಗೆ ದುಡ್ಡು ಬೇಕಾಗುತ್ತದೆ ಅಂತ 12 ಚೆಕ್ ಗಳಿಗೆ ಸಹಿ ಮಾಡಿ ಹೋಗಿರುತ್ತಾರೆ. 12 ಚೆಕ್ ಗಳಲ್ಲಿ 7 ಚೆಕ್ ಗಳನ್ನು ಬಳಕೆ ಮಾಡಿಕೊಂಡು ಬ್ಯಾಂಕ್‌ಗೆ ನಗಧೀಕರಣಕ್ಕೆ ಹಾಕಿ 6,33,000 ಹಣವನ್ನು ಪಡೆದುಕೊಂಡು ಬಳಕೆ ಮಾಡಿಕೊಂಡಿರುತ್ತಾರೆ. ಉಳಿದ 5 ಚೆಕ್ ಗಳನ್ನು ಲಕ್ಷ್ಮೀಪತಿ ಎನ್ನುವವರ ಖಾತೆಗೆ 42,27,000 ರೂ ಹಣವನ್ನು ವರ್ಗಾವಣೆ ಮಾಡಿರುತ್ತಾರೆ. ಆ ನಗಧೀಕರಣವಾದ ಚೆಕ್ ಗಳನ್ನು ಪೋಲಿಸ್ ಅಧಿಕಾರಿಗಳು ಬ್ಯಾಂಕ್ ಗೆ ಬಂದು ಜಪ್ತುಪಡಿಸಿಕೊಂಡು ಅದರ ಬಗ್ಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆಗ ಸಮಯ 12 ರಿಂದ 1 ಗಂಟೆಯಾಗಿರುತ್ತದೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.